# ಜೊತೆಗಾರ ವೆಂಕಟರಾಮ್

ಮೂರು ದಶಕಗಳ ನನ್ನ ಆಪ್ತ ಗೆಳೆಯ ಮತ್ತು ಜೊತೆಗಾರನಾಗಿದ್ದ ವೆಂಕಟರಾಮ್ ಇನ್ನಿಲ್ಲ.

ಐವತ್ತರ ದಶಕದಲ್ಲಿ ಮುಂಬಯಿಯ ಸಮಾಜವಾದಿ ಚಳುವಳಿಯ ಕಾರ್ಯಕರ್ತರಾಗಿದ್ದಾಗ ನಮ್ಮ ಗೆಳೆತನ ಆರಂಭವಾಯಿತು.

ಸಮಾಜವಾದಿ ಚಳುವಳಿಯೊಳಗಿನ ತಿರುವು ಮುರುವುಗಳೊಡನೆ ನಮ್ಮ ರಾಜಕೀಯ ಬದುಕು ಕೆಲಕಾಲ ಕವಲೊಡೆಯಿತು. ವೆಂಕಟರಾಮ್‌ರ ಬದುಕಿನ ತೊರೆ ಅವರತ್ವದ ಅನಂತ ಸಮುದ್ರಕ್ಕೆ ಹತ್ತಿರವಾದಂತೆ ಅವರ ಪಯಣದ ಕಡೆಯ ಮಜಲಿನಲ್ಲಿ ಮತ್ತೆ ಜೊತೆ ಸೇರಿದೆವು. ಹೊಸ ಹಗಲಿಗೆ ಮುನ್ನ ಆಪತ್ಕಾಲೀನ ಪರಿಸ್ಥಿತಿಯ ಕಡುಗಪ್ಪು ಅವಧಿಯಲ್ಲಿ ಬೆಂಗಳೂರಿನ ಸೆಂಟ್ರಲ್ ಜೈಲಿನ ಬ್ಯಾರಕ್‌ಗಳಲ್ಲಿ ನಾವು ಎಂದಿಗೂ ನೆನಪಿಟ್ಟುಕೊಳ್ಳುವ ಆ ಕಾಲ ಕಳೆಯಿತು.

ಜೈಲಿನ ದಿನಚರಿ ಮನುಷ್ಯನ ಜೀವನದ ನಿಜವಾದ ಅಭಿವ್ಯಕ್ತಿಯನ್ನು ಪ್ರಕಟಿಸುತ್ತದೆ. ವೆಂಕಟರಾಮ್ ಬದುಕಿನಲ್ಲೂ ಸಹ ಹಾಗೆಯೇ. ಅವರು ತಮ್ಮ ಸುಖಸಂಕಟಗಳನ್ನು ಆಲೋಚನೆ ಮತ್ತು ಕೆಲಸಗಳನ್ನು ಹಂಚಿಕೊಳ್ಳುತ್ತಿದ್ದ ನಮ್ಮಂತಹ ಜೈಲಿನ ಜೊತೆಗಾರರ ಮನಸ್ಸಿನಲ್ಲಿ ಅದು ಮುದ್ರೆಯೊತ್ತಿದೆ.

ಆಗ ನಮ್ಮಲ್ಲಿ ನಡೆಯುತ್ತಿದ್ದ ವಿಚಾರ ವಿನಿಮಯದಲ್ಲಿ ವೆಂಕಟರಾಮ್ ಯಾವಾಗಲೂ ತಮ್ಮ ಕತ್ತಿಯಲಗಿನಷ್ಟು ಹರಿತವಾದ ವಿಶ್ಲೇಷಕ ಮನಸ್ಸನ್ನು ಬಿಚ್ಚಿಡುತ್ತಿದ್ದರು. ಈ ಹರಿತ ಮನಸ್ಸನ್ನು ಅವರು ತಮ್ಮ ಅತೀವ ಬೌದ್ಧಿಕ ತೃಷೆಯಿಂದಷ್ಟೆ ಗಳಿಸಿರಲಿಲ್ಲ. ತೀವ್ರವಾದ ಮಾನಸಿಕ ಧ್ವನಿ ಸೂಕ್ಷ್ಮಗಳನ್ನು ಬದುಕಿನ ಶ್ರೀಮಂತ ಮತ್ತು ವೈವಿಧ್ಯಮಯ ಅನುಭವದ ರಾಶಿಯಿಂದ ಅವರು ಅದನ್ನು ಗಳಿಸಿದ್ದರು.

ಜೈಲಿನಲ್ಲಿದ್ದಾಗ ನಮ್ಮಲ್ಲಿ ಯಾರಾದರೂ ಹಾಸ್ಯಪ್ರವೃತ್ತಿಯನ್ನು ತೋರಿಸಿದಾಗ ಹೃತ್ಪೂರ್ವಕವಾಗಿ ನಗುತ್ತಿದ್ದರು, ವೆಂಕಟರಾಮ್ ಆದರೆ ಆ ನಗುವಿಗೆ ಸೆರೆಮನೆಯ ಹೆಂಗಸರ

ಬ್ಯಾರಕ್ಕಿನಲ್ಲಿ ಒಂಟಿತನದ ಶಾಪ ಅನುಭವಿಸುತ್ತ ನರಳುತ್ತಿದ್ದ ಗೆಳತಿ ಸ್ನೇಹಲತಾರೆಡ್ಡಿಯವರ ಸಂಕಟವನ್ನು ನೆನೆದೊಡನೆ ಚಿಮ್ಮುತ್ತಿದ್ದ ಕಣ್ಣೀರನ್ನು ಮುಚ್ಚಿಡುವ ಶಕ್ತಿ ಇರುತ್ತಿರಲಿಲ್ಲ. ಆಕೆಯ ಬದುಕು ಆ ಸಂಕಟದಲ್ಲೇ ಕಮರಿ ಹೋಯಿತು.

ರಾಜಕೀಯ ಸಮಸ್ಯೆಗಳ ಬಗ್ಗೆ ವೆಂಕಟರಾಮ್‌ಗೆ ಆಳವಾದ ಒಳನೋಟವಿತ್ತು. ಸಮಾಜಶಾಸ್ತ್ರದ ತಳಪಾಯವನ್ನು ಕಡೆಗಣಿಸಿ ಅಪ್ಪಟ 'ಅರ್ಥವಾದ'ದ ಆಧಾರದಮೇಲೆ ರಾಜಕೀಯ ರಚನೆಯನ್ನು ಕಟ್ಟಲಾಗದು ಎಂಬ ಅರಿವಿದ್ದ ಕೆಲವೇ ಜನರಲ್ಲಿ ಅವರೊಬ್ಬರು. ಸಮಾಜದಲ್ಲಿ ತುಳಿತಕ್ಕೆ ಸಿಕ್ಕಿ ನಿರ್ಲಕ್ಷಿತರಾದವರ ಬಗ್ಗೆ ಅವರಿಗಿದ್ದ ತೀವ್ರ ಸಹಕಂಪನ ಇಂಥ ಪರಿಗಣನೆಯಿಂದಲೇ ಉಂಟಾದದ್ದು.

ಕಾರ್ಮಿಕ ಸಂಘಟಕರಾಗಿ ವೆಂಕಟರಾಮ್‌ರ ತೀವ್ರಗಾಮಿತ್ವ ವಾಸ್ತವದ ಬಗೆಗಿನ ಅರಿವಿನಿಂದ ಹದಗೊಂಡಿದ್ದರಿಂದ ಅದು ಎಂದೂ ಹುಚ್ಚು ಸಾಹಸವಾಗಿ ದುರ್ಬಲಗೊಳ್ಳುತ್ತಿರಲಿಲ್ಲ.

ಪ್ರಾಮಾಣಿಕ ಜನತಂತ್ರವಾದಿ ವೆಂಕಟರಾಮ್ ಸಮೂಹ ನಿರ್ಣಯಗಳಲ್ಲಿ ನಂಬಿಕೆಯಿದ್ದವರು. ವೈಯಕ್ತಿಕ ಒಂಟಿಖಯಾಲಿಗಳಿಂದ ದೂರವಿದ್ದವರು.

ಹಿಂದ್ ಮಜದೂರ್ ಸಭಾದ ರಾಷ್ಟ್ರೀಯ ಅಧ್ಯಕ್ಷ ಸ್ಥಾನದಂತಹ ಅತಿ ದೊಡ್ಡ ಹೊಣೆಗಾರಿಕೆ ಅವರ ಹೆಗಲಿಗೆ ಬಂದದ್ದು ಅಯಾಚಿತವಾಗಿ. ಆ ಭಾರ ಹೊರಲು ಬಹು ಕಾಲ ಬದುಕಲಿಲ್ಲ.

ವೆಂಕಟರಾಮ್ ಗತಿಸಿದರೂ, ಅವರು ಅಮರವಾದದ್ದನ್ನು ಉಳಿಸಿಹೋಗಿದ್ದಾರೆ. ಬದುಕು ಮತ್ತು ಸಾವಿನ ಬಗ್ಗೆ ವೆಂಕಟರಾಮ್‌ಗಿದ್ದ ಆರೋಗ್ಯಕರ ಮನೋಧರ್ಮವನ್ನು ರವೀಂದ್ರನಾಥ ಠಾಗೋರರ ಈ ಸಾಲುಗಳು ಸಮರ್ಥವಾಗಿ ಪ್ರತಿಫಲಿಸುತ್ತವೆ.

How varied is the game of life on this earth
Its meetings and partings. Its laughteres and tears
Oh to sing of Mars Joys and Pains
And leave behind a melody undying.